KAGD200000262023

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ರವರ ನ್ಯಾಯಾಲಯ, ನರಗುಂದ.**

**ಸ್ಥಳ : ನರಗುಂದ**

–:: ಉಪಸ್ಥಿತರು ::–

**ಶ್ರೀ ಜಿನ್ನಪ್ಪಾ ಚೌಗಲಾ**

**ಬಿ.ಎ., ಎಲ್.ಎಲ್.ಬಿ.,**

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನರಗುಂದ.

**ತೀರ್ಪಿನ ದಿನಾಂಕಃ 01 ನೇ ಜುಲೈ , 2026.**

**ಸಿ.ಸಿ. ನಂ.09/2023**

**ಪಿರ್ಯಾದುದಾರರು** : ಕರ್ನಾಟಕ ಸರ್ಕಾರದ ಪರವಾಗಿ,
ನರಗುಂದ ಪೋಲಿಸರು.

**(ಸಹಾಯಕ ಸರ್ಕಾರಿ ಅಭಿಯೋಜಕರು)**

**– ವಿರುದ್ಧ –**

**ಆರೋಪಿತರು** :

1. ಸಂಗನಗೌಡ ತಂದೆ ಹನಮಂತರಾಯ ಮಾಲಿಬಿರಾದಾರ
ವಯಾಃ 50, ಉಃ ಬಸ್ಸ ಡ್ರೈವರ್,
ಸಾಃ ಹುಲಿಕಲ್, ತಾಃ ಶಹಾಪೂರ, ಯಾದಗೇರಿ

2. ಬಸಯ್ಯ ತಂದೆ ಶರಣಬಸಯ್ಯ ಮೇಟಿ
ವಯಾಃ 48 ವರ್ಷ, ಉಃ ಶೇತ್ಕಿ
ಸಾಃ ರಾಧಾಪೂರ ಪೇಟೆ, ತಾಃ ರಾಮದುರ್ಗ,
ಜಿಃ ಬೆಳಗಾವಿ.**(ತಪ್ಪು ಒಪ್ಪಿಕೊಂಡಿರುತ್ತಾನೆ.)**

**(ಶ್ರೀ ಆರ್.ಟಿ.ಪಿ., ವಕೀಲರು)**

| | | |
|---|---|---|
| 1. **ಅಪರಾಧ ನಡೆದ ದಿನಾಂಕ** | : | 30-07-2022 |
| 2. **ಅಪರಾಧ ವರದಿ ಆದ ದಿನಾಂಕ** | : | 01-08-2022 |
| 3. **ಪಿರ್ಯಾದುದಾರರ ಹೆಸರು** | : | **ದುಂಡಯ್ಯ ಮಾರಯ್ಯ ಹಿರೇಮಠ** |
| 4. **ಸಾಕ್ಷ್ಯ ಪ್ರಾರಂಭವಾದ ದಿನಾಂಕ** | : | 03-09-2024 |
| 5. **ಸಾಕ್ಷ್ಯ ಮುಕ್ತಾಯವಾದ ದಿನಾಂಕ** | : | 03-03-2026 |
| 6. **ಅಪರಾಧಗಳು** | : | **ಭಾರತೀಯ ದಂಡ ಸಂಹಿತೆ ಕಲಂ.279, 338.** |
| 7. **ನ್ಯಾಯಾಧೀಶರ ಅಭಿಪ್ರಾಯ** | : | **1 ನೇ ಆರೋಪಿತನನ್ನು ನಿರಪರಾಧಿ ಎಂದು ತಿರ್ಮಾನಿಸಿ, ಬಿಡುಗಡೆ ಮಾಡಲಾಗಿದೆ.** |

## -:: ತೀರ್ಪು ::-

ಸಹಾಯಕ ಪೊಲೀಸ್ ಉಪ-ನಿರೀಕ್ಷಕರು, ನರಗುಂದ ಪೋಲಿಸ್ ಠಾಣೆ ಇವರು 1 ನೇ ಆರೋಪಿತನ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ.279, 338 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಎಸಗಿರುತ್ತಾನೆ ಎಂದು ಮತ್ತು 2 ನೇ ಆರೋಪಿತನ ವಿರುದ್ಧ ಮೋಟಾರು ವಾಹನ ಕಾಯ್ದೆಯ ಕಲಂ.196 ರಡಿಯಲ್ಲಿ ಶಿಕ್ಷಿಸಲ್ಪಡುವ ಅಪರಾಧವನ್ನು ಎಸಗಿರುತ್ತಾನೆ ಎಂದು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. **ಅಭಿಯೋಜನೆ ಪ್ರಕರಣದ ಸಂಕ್ಷಿಪ್ತ ವಸ್ತುಸ್ಥಿತಿ ಈ ಕೆಳಕಂಡಂತೆ ಇದೆ.**

ದಿನಾಂಕಃ 30-07-2022 ರಂದು ಬೆಳಿಗ್ಗೆ 09.30 ಗಂಟೆಯ ಸುಮಾರಿಗೆ ಚಾ.ಸಾ-6 ರವರು ಕುಳಗೇರಿ ಗ್ರಾಮದ ಹತ್ತಿರ ಇರುವ ತಮ್ಮ ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ಗೊಬ್ಬರ ಖರೀದಿಸಲು 2 ನೇ ಆರೋಪಿತನು ವಿಮೆ ಹೊಂದಿರದ ಬೈಕ ನಂ.ಕೆ.ಎ-24/ಡಬ್ಲು-8887 ನೇದ್ದರ ಮೇಲೆ ನರಗುಂದಕ್ಕೆ ಬರುತ್ತಿದ್ದಾಗ ನರಗುಂದ ಪೊಲೀಸ ಠಾಣೆ ವ್ಯಾಪ್ತಿಯ ಕೊಣ್ಣೂರು ಗ್ರಾಮದ ಗುಜಮಾಗಡಿರವರ ಪೆಟ್ರೋಲ ಬಂಕ ಹತ್ತಿರ ಹುಬ್ಬಳ್ಳಿ-ನರಗುಂದ ರಾಷ್ಟ್ರೀಯ ಹೆದ್ದಾರಿ ಸಾರ್ವಜನಿಕ ರಸ್ತೆಯ ಮೇಲೆ 1 ನೇ ಆರೋಪಿತನು ಕೆ.ಎಸ್.ಆರ್.ಟಿ.ಸಿ ಬಸ್ ನಂ.ಕೆಎ-33/ಎಫ್-0407 ನೇದ್ದನ್ನು ಹುಬ್ಬಳ್ಳಿಯಿಂದ ವಿಜಯಪುರದ ಕಡೆಗೆ ಅತಿವೇಗವಾಗಿ ಹಾಗೂ ನಿಷ್ಕಾಳಜಿತನದಿಂದ,

ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ಬಂದು ಚಾ.ಸಾ-6 ರವರ ಬೈಕಿಗೆ ಎದುರುಗಡೆಯಿಂದ ಡಿಕ್ಕಿಪಡಿಸಿ, ಅಪಘಾತಮಾಡಿ, ಚಾ.ಸಾ-6 ರವರಿಗೆ ತೀವ್ರ ಸ್ವರೂಪದ ಗಾಯಪಡಿಸಿರುವುದು ತನಿಖೆಯಿಂದ ದೃಢಪಟ್ಟಿದ್ದರಿಂದ 1 ಮತ್ತು 2 ನೇ ಆರೋಪಿತರ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿ ಕ್ರಮ ಜರುಗಿಸಬೇಕೆಂದು ಕೋರಿರುತ್ತಾರೆ.

3. ದೋಷಾರೋಪಣ ಪತ್ರವನ್ನು ಪರಿಶೀಲಿಸಿ ಆರೋಪಿತರ ವಿರುದ್ಧ ಮೇಲೆ ನಮೂದಿಸಲಾದ ಅಪರಾಧಗಳಿಗೆ ಸಂಜ್ಞೆ ತೆಗೆದುಕೊಂಡು ಆರೋಪಿತರ ವಿರುದ್ಧ ಈ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದೆ.

4. ಆರೋಪಿತರಿಗೆ ಸಮನ್ಸ್ ಜಾರಿ ಮಾಡಿದ್ದು ಆ ಪೈಕಿ 1 ನೇ ಆರೋಪಿತನು ತನ್ನ ವಕೀಲರ ಮುಖಾಂತರ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಅರ್ಜಿ ಸಲ್ಲಿಸಿದ್ದು, ಸದರಿ ಆರೋಪಿತನು ನ್ಯಾಯಾಲಯಕ್ಕೆ ತೃಪ್ತಿಯಾಗುವ ಜಾಮೀನು ನೀಡಿದ್ದರಿಂದ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಗಿದೆ. 2 ನೇ ಆರೋಪಿತನು ನ್ಯಾಯಾಲಯಕ್ಕೆ ಹಾಜರಾಗಿ ತನ್ನ ತಪ್ಪನ್ನು ಒಪ್ಪಿಕೊಂಡಿದ್ದರಿಂದ ಆತನಿಗೆ ದಂಡ ವಿಧಿಸಿ ಬಿಡುಗಡೆ ಮಾಡಲಾಗಿರುತ್ತದೆ. ಕಾರಣ, 1 ನೇ ಆರೋಪಿತನ ವಿರುದ್ಧ ಮಾತ್ರ ಪ್ರಕರಣ ಮುಂದುವರೆಸಲಾಗಿರುತ್ತದೆ.

5. ದಂಡ ಪ್ರಕ್ರಿಯಾ ಸಂಹಿತೆ ಕಲಂ.207 ರ ಅಡಿಯಲ್ಲಿ ಅವಶ್ಯವಿರುವಂತೆ ದೋಷಾರೋಪಣಾ ಪತ್ರದ ನಕಲನ್ನು 1 ನೇ ಆರೋಪಿತನಿಗೆ ನೀಡಿ, ಆತನ ವಿರುದ್ಧ ಪ್ರಕರಣವನ್ನು ವಿಚಾರಣೆ ಮಾಡಲಾಗಿರುತ್ತದೆ. ನಂತರ 1 ನೇ ಆರೋಪಿತನ ವಿರುದ್ಧ ಆಪಾದನೆಗಳ ಸಾರಾಂಶವನ್ನು ತಯಾರಿಸಿ, ಅವರಿಗೆ ತಿಳಿಸಿ ಓದಿ ಹೇಳಲಾಗಿ ಸದರಿ ಆರೋಪಿತನು ತಪ್ಪನ್ನು ಒಪ್ಪಿ ಕೊಂಡಿಲ್ಲ ಹಾಗೂ ಪ್ರಕರಣದ ವಿಚಾರಣೆಯಾಗಲು ಕೋರಿರುತ್ತಾನೆ.

6. ಅಭಿಯೋಜನೆಯು, 1 ನೇ ಆರೋಪಿತನ ವಿರುದ್ಧ ಇರುವ ಆಪಾದನೆಗಳನ್ನು ರುಜುವಾತುಪಡಿಸಲು, ಅಂತಿಮ ವರದಿಯಲ್ಲಿ ನಮೂದಿಸಿರುವ 11 ಜನ ಸಾಕ್ಷಿದಾರರ ಪೈಕಿ 6

ಸಾಕ್ಷಿದಾರರನ್ನು ಪ್ರಾ.ಸಾ–1 ರಿಂದ 06 ಎಂದು ಸಾಕ್ಷ್ಯ ನುಡಿಸಿದ್ದು, ನಿ.ಪಿ–1 ರಿಂದ 23 ದಾಖಲೆಯನ್ನು ಗುರುತಿಸಿಕೊಂಡಿದ್ದಾರೆ.

7. ನಂತರ, 1 ನೇ ಆರೋಪಿತನ ವಿರುದ್ಧ ಅಪರಾಧ ಸೂಚಿಸುವ ಹೇಳಿಕೆಗಳನ್ನು ದಂಡ ಪ್ರಕ್ರಿಯಾ ಸಂಹಿತೆಯ ಕಲಂ.313 ರಡಿಯಲ್ಲಿ ದಾಖಲಿಸಿಕೊಳ್ಳಲಾಯಿತು. 1 ನೇ ಆರೋಪಿತನು ತನ್ನ ವಿರುದ್ಧ ಸೂಚಿಸಿದ ಎಲ್ಲಾ ಹೇಳಿಕೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾನೆ ಹಾಗೂ ತಮ್ಮ ಪರ ಯಾವುದೇ ಸಾಕ್ಷಿದಾರರ ಹೇಳಿಕೆ ಮಾಡಿಸಿರುವುದಿಲ್ಲ.

8. ಉಭಯ ಪಕ್ಷಕಾರರ ವಾದಗಳನ್ನು ಆಲಿಸಲಾಯಿತು. ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು.

9. ಈ ಕೆಳಕಂಡ ಅಂಶಗಳನ್ನು ತೀರ್ಮಾನಿಸುವುದು ಅವಶ್ಯ ಎಂದು ಕಂಡುಬಂದಿರುತ್ತದೆ.

## ಅಂಶಗಳು

1. *ದಿನಾಂಕಃ 30-07-2022 ರಂದು ಬೆಳಿಗ್ಗೆ 09.30 ಗಂಟೆಯ ಸುಮಾರಿಗೆ ಚಾ.ಸಾ–6 ರವರು ಕುಳಗೇರಿ ಗ್ರಾಮದ ಹತ್ತಿರ ಇರುವ ತಮ್ಮ ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ಗೊಬ್ಬರ ಖರೀದಿಸಲು 2 ನೇ ಆರೋಪಿತನು ವಿಮೆ ಹೊಂದಿರದ ತನ್ನ ಬೈಕ ನಂ.ಕೆ.ಎ–24/ಡಬ್ಲು–8887 ನೇದ್ದರ ಮೇಲೆ ನರಗುಂದಕ್ಕೆ ಬರುತ್ತಿದ್ದಾಗ ನರಗುಂದ ಪೊಲೀಸ ಠಾಣೆ ವ್ಯಾಪ್ತಿಯ ಕೊಣ್ಣೂರು ಗ್ರಾಮದ ಗುಜಮಾಗಡಿರವರ ಪೆಟ್ರೋಲ ಬಂಕ ಹತ್ತಿರ ಹುಬ್ಬಳ್ಳಿ–ನರಗುಂದ ರಾಷ್ಟ್ರೀಯ ಹೆದ್ದಾರಿ ಸಾರ್ವಜನಿಕ ರಸ್ತೆಯ ಮೇಲೆ 1 ನೇ ಆರೋಪಿತನು ಕೆ.ಎಸ್.ಆರ್.ಟಿ.ಸಿ ಬಸ್ ನಂ.ಕೆಎ–33/ಎಫ್–0407 ನೇದ್ದನ್ನು ಹುಬ್ಬಳ್ಳಿಯಿಂದ ವಿಜಯಪುರದ ಕಡೆಗೆ ಅತಿವೇಗವಾಗಿ ಹಾಗೂ ನಿಷ್ಕಾಳಜಿತನದಿಂದ, ಮಾನವೀಯ ಪ್ರಾಣಕ್ಕೆ ಅಪಾಯವಾಗುವಂತೆ ಚಲಾಯಿಸಿಕೊಂಡು ಬಂದು ಚಾ.ಸಾ–6 ರವರ ಬೈಕಿಗೆ ಎದುರುಗಡೆಯಿಂದ ಡಿಕ್ಕಿಪಡಿಸಿ, ಅಪಘಾತಮಾಡಿ, ಚಾ.ಸಾ–6 ರವರಿಗೆ ತೀವ್ರ ಸ್ವರೂಪದ*

*ಗಾಯಪಡಿಸಿದ್ದು, ಆ ಮೂಲಕ 1ನೇ ಆರೋಪಿತನು ಭಾರತೀಯ ದಂಡ ಸಂಹಿತೆ ಕಲಂ.279, 338ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧಗಳನ್ನು ಎಸಗಿರುತ್ತಾನೆ ಎಂದು ಅಭಿಯೋಜನೆಯು ಸಂಶಯಾತೀತವಾಗಿ ರುಜುವಾತುಪಡಿಸುವುದೇ?.*

*2. ಯಾವ ಆದೇಶ?*

10. ಮೇಲ್ಕಂಡ ಅಂಶಗಳಿಗೆ ಅಂತಿಮ ನಿರ್ಣಯ ಈ ಕೆಳಕಂಡಂತಿವೆಃ

**ಅಂಶ ನಂ.1 : ನಕಾರಾತ್ಮಕವಾಗಿ**

**ಅಂಶ ನಂ.2 : ಅಂತಿಮ ಆದೇಶದ ಪ್ರಕಾರ ಈ ಕೆಳಕಂಡ ಕಾರಣಗಳಿಗಾಗಿ**

## –:: ಕಾರಣಗಳು ::–

11. **ಅಂಶ ನಂ.1:–** ದೋಷಾರೋಪಣೆ ಪಟ್ಟಿಯಲ್ಲಿ ತಿಳಿಸಿದಂತೆ 1ನೇ ಆರೋಪಿತನ ವಿರುದ್ಧ ಹೊರಿಸಲಾದ ಆರೋಪಗಳನ್ನು ಸಾಬೀತುಪಡಿಸುವ ಸಲುವಾಗಿ ಅಭಿಯೋಜನೆ ಪರ ವಕೀಲರು ಅಂತಿಮ ವರದಿಯಲ್ಲಿ ನಮೂದಿಸಿದ 11 ಸಾಕ್ಷಿದಾರರ ಪೈಕಿ ಚಾ.ಸಾ–1, 2, 4 ರಿಂದ 6, 11ರವರನ್ನು ಪ್ರಾ.ಸಾ–1 ರಿಂದ 6 ಎಂದು ಸಾಕ್ಷಿ ಮಾಡಿಸಿರುತ್ತಾರೆ ಮತ್ತು ನಿಶಾನೆ ಪಿ–1 ರಿಂದ ಪಿ–23 ಎಂದು ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

12. ಪ್ರಕರಣದ ದೂರುದಾರ ಹಾಗೂ ಸಾಂಧರ್ಭಿಕ ಸಾಕ್ಷಿಯಾದ ಚಾ.ಸಾ–1ರವರು ಪ್ರಾ.ಸಾ–1 ಎಂದು ಸಾಕ್ಷ್ಯ ನುಡಿದಿದ್ದು, ಮುಖ್ಯ ವಿಚಾರಣೆಯಲ್ಲಿ, ದಿ.30–07–2022 ರಂದು ಸಂಜೆ 4–00 ರಿಂದ 5–00 ಗಂಟೆಯ ಸಮಯದಲ್ಲಿ ಮನೆಯಲ್ಲಿ ಇದ್ದಾಗ, ಚಾಸಾ–5 ರವರು ಕರೆ ಮಾಡಿ ಚಾಸಾ–6 ರವರಿಗೆ ಅಪಘಾತವಾಗಿರುವ ಬಗ್ಗೆ ತಿಳಿಸಿದ್ದು, ಆ ಪ್ರಕಾರ ಬಾಗಲಕೋಟೆಯ ಕಟ್ಟಿ ಆಸ್ಪತ್ರೆಗೆ ಹೋಗಿ, ಘಟನೆಯ ಕುರಿತು ಚಾಸಾ–6 ರವರನ್ನು ವಿಚಾರಿಸಿದಾಗ ಕುಳಗೇರಿ ಗ್ರಾಮದಲ್ಲಿ ಇರುವ

ತಮ್ಮ ಜಮೀನುಗಳಿಗೆ ಗೊಬ್ಬರ ತರಲು, ತಮ್ಮ ಬೈಕ್ ಮೇಲೆ ನರಗುಂದಕ್ಕೆ ಹೋಗುವಾಗ ಕೊಣ್ಣೂರು ಗ್ರಾಮದ ಗುಜಮಾಗಡಿ ಪೆಟ್ರೋಲ್ ಬಂಕ್ ಹತ್ತಿರ ಕೆ.ಎಸ್.ಆರ್.ಟಿ.ಸಿ ಬಸ್ ನಂ.ಕೆ.ಎ-33/ಎಫ್-0407 ನೇದ್ದನ್ನು ಅದರ ಚಾಲಕನು ಅತೀ ವೇಗವಾಗಿ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ಎದುರಿನಿಂದ ಡಿಕ್ಕಿ ಪಡಿಸಿ ಅಪಘಾತ ಮಾಡಿರುವ ಬಗ್ಗೆ ತಿಳಿಸಿರುತ್ತಾರೆ ಎಂದು, ಮಾರನೇ ದಿನ ಸದರಿ ಬಸ್ ಚಾಲಕನ ವಿರುದ್ಧ ದೂರು ಸಲ್ಲಿಸಿದ್ದು, ದಿ.02-08-2022 ರಂದು ಮಧ್ಯಾಹ್ನ 12-00 ಗಂಟೆಯ ಸಮಯದಲ್ಲಿ ತಾನು ತೋರಿಸಿದ ಅಪಘಾತ ಸ್ಥಳದಲ್ಲಿ ಪೊಲೀಸರು ಸ್ಥಳ ಮಹಜರ್ ಜರುಗಿಸಿ, ಘಟನಾ ಸ್ಥಳದ ಪೋಟೊ ತೆಗೆದಿದ್ದು, ನಂತರ, ಅದೇ ದಿನ ಕೊಣ್ಣೂರು ಹೊರ ಠಾಣೆಗೆ ಕರೆದುಕೊಂಡು ಹೋಗಿ, ಮಧ್ಯಾಹ್ನ 3-00 ರಿಂದ 4-00 ಗಂಟೆಯ ಸಮಯದಲ್ಲಿ ಚಾಸಾ-6 ರವರ ಬೈಕ್‌ನ್ನು ನಿಲ್ಲಿಸಿ, ಪೋಟೊ ಪಡೆದು, ದಿ.08-08-2022 ರಂದು ಪೊಲೀಸ್ ಠಾಣೆಗೆ ಕರೆಯಿಸಿದ್ದರು ಎಂದು ದಾಖಲೆಗಳನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಕಾರಣ, ದೂರನ್ನು ನಿ.ಪಿ-1 ಎಂದು, ಸ್ಥಳ ಪಂಚನಾಮೆಯನ್ನು ನಿ.ಪಿ-2 ಎಂದು, ಆ ಸಮಯದಲ್ಲಿ ತೆಗೆದ ಪೋಟೊವನ್ನು ನಿ.ಪಿ-3 ಎಂದು, ಜಪ್ತು ಪಂಚನಾಮೆ ಸಮಯದಲ್ಲಿ ತೆಗೆದ ಪೋಟೊವನ್ನು ನಿ.ಪಿ-4 ಎಂದು ಗುರುತಿಸಲಾಗಿದೆ.

13. ಆದರೆ, ಮುಖ್ಯ ವಿಚಾರಣೆಯಲ್ಲಿ, ಠಾಣೆಯಲ್ಲಿ ಪೊಲೀಸರು 1 ನೇ ಆರೋಪಿತನ್ನು ತೋರಿಸಿದ ಬಗ್ಗೆ, ಜಪ್ತು ಪಂಚನಾಮೆ ಜರುಗಿಸಿದ ಬಗ್ಗೆ ಹಾಗೂ ಮುಂದುವರೆದ ಹೇಳಿಕೆ ನೀಡಿದ ಬಗ್ಗೆ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿಯುವಲ್ಲಿ ವಿಫಲವಾದ ಕಾರಣ, ಅಭಿಯೋಜನೆ ಪರ ವಕೀಲರು ಪ್ರಾ.ಸಾ-1 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀಸವಾಲು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ, ದಿನಾಂಕ:08-08-2022 ರಂದು ನರಗುಂದ ಪೊಲೀಸರು ಠಾಣೆಗೆ ಕರೆಯಿಸಿ, ಅಪಘಾತ ಮಾಡಿದ ಬಸ ಚಾಲಕನನ್ನು ತೋರಿಸಿದ ಕುರಿತು, ಆ ಸಮಯದಲ್ಲಿ ಆತ ಅಪಘಾತದ ಬಗ್ಗೆ ಒಪ್ಪಿಕೊಂಡ ಕುರಿತು, ಈ ಎಲ್ಲ

ವಿಷಯಗಳ ಕುರಿತು ಪೊಲೀಸರಿಗೆ ಹೇಳಿಕೆ ನೀಡಿರುವ ಕುರಿತು, ದಿನಾಂಕ: 02-08-2024 ರಂದು ಕೊಣ್ಣೂರು ಪೊಲೀಸ್ ಠಾಣೆಯ ಆವರಣದಲ್ಲಿ ಮಧ್ಯಾಹ್ನ 02.00 ರಿಂದ 03.00 ಗಂಟೆಯವರೆಗೆ ಜಪ್ತು ಪಂಚನಾಮೆ ಜರುಗಿಸಿ, ಫೋಟೊ ಪಡೆದಿರುವ ಕುರಿತು ಅಭಿಯೋಜನೆ ಪರ ವಕೀಲರು ಸೂಚಿಸಿದ ಎಲ್ಲ ಹೇಳಿಕೆಗಳನ್ನು ಪ್ರಾ.ಸಾ-1 ರವರು ಸ್ಪಷ್ಟವಾಗಿ ಒಪ್ಪಿಕೊಂಡಿರುತ್ತಾರೆ. ಆ ಮೂಲಕ, ಪ್ರಾ.ಸಾ-1 ರವರು 1 ನೇ ಆರೋಪಿತನ ಅಪರಾಧಗಳ ಕುರಿತು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಕಾರಣ, ಜಪ್ತು ಪಂಚನಾಮೆಯನ್ನು ನಿ.ಪಿ-5 ಎಂದು ಗುರುತಿಸಲಾಗಿದೆ.

14. ಆದರೆ, 1 ನೇ ಆರೋಪಿತನ ಪರ ವಕೀಲರು ಪಾಟೀಸವಾಲು ಮಾಡಿದ ಸಮಯದಲ್ಲಿ, ಅಪಘಾತದ ಸಮಯದಲ್ಲಿ ತಾನು ಮನೆಯಲ್ಲಿ ಇದ್ದುದರಿಂದ ಅಪಘಾತದ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಪ್ರಾ.ಸಾ-1 ರವರು ಸಾಂಧರ್ಭಿಕ ಸಾಕ್ಷಿಯಾಗಿದ್ದು, ಅಪಘಾತವನ್ನು ಪ್ರತ್ಯಕ್ಷವಾಗಿ ನೋಡಿರದ ಕಾರಣ, 1 ನೇ ಆರೋಪಿತನ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಅಭಿಯೋಜನೆಗೆ ಯಾವುದೇ ರೀತಿಯಿಂದ ಸಹಕಾರಿಯಾಗಿರುವುದಿಲ್ಲ. ಆದರೆ, ಸದರಿಯವರ ಸಾಕ್ಷ್ಯವನ್ನು ಪ್ರಕರಣದ ಉಳಿದ ಸಾಕ್ಷ್ಯಗಳೊಂದಿಗೆ ಹೊಂದಾಣಿಕೆ ಮಾಡಿನೋಡಬೇಕಾಗುತ್ತದೆ.

15. ಪ್ರಕರಣದ ಸಾಂಧರ್ಭಿಕ ಸಾಕ್ಷಿಯಾದ ಚಾ.ಸಾ-4 ರವರು ಪ್ರಾ.ಸಾ-3 ಎಂದು ಸಾಕ್ಷ್ಯ ನುಡಿದಿದ್ದು, ಮುಖ್ಯ ವಿಚಾರಣೆಯಲ್ಲಿ, ಅಂದಾಜು 3 ವರ್ಷಗಳ ಹಿಂದೆ ಮನೆಯಲ್ಲಿದ್ದಾಗ ಮಧ್ಯಾಹ್ನ 12.30-1.00 ಗಂಟೆಯ ಸಮಯದಲ್ಲಿ ಚಾಸಾ-6 ರವರು ಕರೆ ಮಾಡಿ, ಕೊಣ್ಣೂರು ಹತ್ತಿರ ತನಗೆ ಅಪಘಾತವಾಗಿದ್ದು ಬಾಗಲಕೋಟೆಯ ಕಟ್ಟಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದಾಗಿ ತಿಳಿಸಿರುತ್ತಾರೆ ಎಂದು, ಅಂದಾಜು 3 ದಿನಗಳ ನಂತರ ಆಸ್ಪತ್ರೆಗೆ ಹೋಗಿ, ಚಾಸಾ-6 ರವರನ್ನು ನೋಡಿದ್ದು, ಆ ಸಮಯದಲ್ಲಿ ಚಾಸಾ-6 ರವರು ತಾವು ನರಗುಂದದಿಂದ ಗೊಬ್ಬರ ತರಲು ಬೈಕ ಮೇಲೆ ನರಗುಂದಕ್ಕೆ

ಹೋಗುವಾಗ ಕೊಣ್ಣೂರು ಗ್ರಾಮದಲ್ಲಿ ಕೆ ಎಸ ಆರ ಟಿ ಸಿ ಬಸ್ ಅಡ್ಡ ಬಂದು ತಮ್ಮ ಬೈಕಗೆ ಡಿಕ್ಕಿ ಪಡಿಸಿ ಅಪಘಾತ ಮಾಡಿರುತ್ತದೆ ಎಂದು ಮತ್ತು ಸದರಿ ಅಪಘಾತದಿಂದ ತಮ್ಮ ಬಲಗಾಲಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ ಎಂದು, ಸದರಿ ಅಪಘಾತವು ಬೆಳಿಗ್ಗೆ 10–00 ರಿಂದ 10.30 ಗಂಟೆಯ ಸಮಯದಲ್ಲಿ ಆಗಿರುತ್ತದೆ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು, ಸದರಿ ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂಬುದು ಗೊತ್ತಿಲ್ಲ ಎಂದು, ಸದರಿ ಅಪಘಾತವನ್ನು ಯಾರು ಮಾಡಿದ್ದಾರೆ ಎಂಬುದು ಸಹ ಗೊತ್ತಿಲ್ಲ ಎಂದು, ಪ್ರಕರಣದ ಕುರಿತು ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆ ಮೂಲಕ, ಮುಖ್ಯ ವಿಚಾರಣೆಯಲ್ಲಿಯೇ 1 ನೇ ಆರೋಪಿತನ ಅಪರಾಧಗಳ ಕುರಿತು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿಯುವಲ್ಲಿ ವಿಫಲವಾಗಿದ್ದಾರೆ.

16. ಕಾರಣ, ಫ್ರಾ.ಸಾ–3 ರವರು ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುವದರಿಂದ, ಅಭಿಯೋಜನೆ ಪರ ವಕೀಲರು ಫ್ರಾ.ಸಾ–3 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀಸವಾಲು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿಯೂ ಸಹ 1 ನೇ ಆರೋಪಿತನ ಅತಿವೇಗ ಮತ್ತು ಅಜಾಗರೂಕತೆಯ ವಾಹನ ಚಾಲನೆಯಿಂದ ಅಪಘಾತವಾಗಿರುವ ಕುರಿತು ಅಭಿಯೋಜನೆ ಪರ ವಕೀಲರು ಸೂಚಿಸಿದ ಎಲ್ಲ ಹೇಳಿಕೆಗಳನ್ನು ಫ್ರಾ.ಸಾ–3 ರವರು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಮುಂದುವರೆದು, ಪ್ರಕರಣದ ಕುರಿತು ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಕಾರಣ, ಅಭಿಯೋಜನೆಯು, ಫ್ರಾ.ಸಾ–3 ರವರ ಹೇಳಿಕೆಯನ್ನು ನಿ.ಪಿ–8 ಎಂದು ಗುರುತಿಸಿಕೊಂಡಿರುತ್ತದೆ. ಆ ಮೂಲಕ, ಫ್ರಾ.ಸಾ–3 ರವರು 1 ನೇ ಆರೋಪಿತನ ಅಪರಾಧಗಳನ್ನು ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದ್ದಾರೆ.

17. ಪ್ರಕರಣದ ಇನ್ನೋರ್ವ ಸಾಂಧರ್ಭಿಕ ಸಾಕ್ಷಿಯಾದ ಚಾ.ಸಾ–5 ರವರು ಫ್ರಾ.ಸಾ–4 ಎಂದು ಸಾಕ್ಷ್ಯ ನುಡಿದಿದ್ದು, ಮುಖ್ಯ ವಿಚಾರಣೆಯಲ್ಲಿ, 2022 ನೇ ಸಾಲಿನಲ್ಲಿ

ರಾಮದುರ್ಗದ ಮನೆಯಲ್ಲಿದ್ದಾಗ ಮಧ್ಯಾಹ್ನ 11.00 ಗಂಟೆಯ ಸಮಯದಲ್ಲಿ ಚಾಸಾ-1 ರವರು ಕರೆ ಮಾಡಿ, ಕೊಣ್ಣೂರು ಹತ್ತಿರ ಚಾಸಾ-6 ರವರಿಗೆ ಅಪಘಾತವಾಗಿರುವ ಬಗ್ಗೆ ತಿಳಿಸಿದ್ದು, ಆ ಪ್ರಕಾರ ಬಾಗಲಕೋಟೆಯ ಆಸ್ಪತ್ರೆಗೆ ಹೋಗಿ ನೋಡಿದಾಗ ಚಾಸಾ-6 ರವರ ಎಡಗಾಲಿಗೆ ಮತ್ತು ಬೆನ್ನಿಗೆ ಗಾಯಗಳಾಗಿದ್ದವು ಎಂದು, ನಂತರ ಚಾಸಾ-6 ರವರನ್ನು ವಿಚಾರಣೆ ಮಾಡಿದಾಗ ಬೆಳಿಗ್ಗೆ 9-00 ಗಂಟೆಗೆ ತಾವು ನರಗುಂದದಿಂದ ಗೊಬ್ಬರ ತರಲು ಬೈಕ ಮೇಲೆ ನರಗುಂದಕ್ಕೆ ಹೋಗುವಾಗ ಕೊಣ್ಣೂರು ಗ್ರಾಮದಲ್ಲಿ ಹೊಟೇಲ ಹತ್ತಿರ ಕೆ.ಎಸ.ಆರ.ಟಿ.ಸಿ ಬಸ್ ತಮ್ಮ ಬೈಕಿಗೆ ಡಿಕ್ಕಿ ಪಡಿಸಿ ಅಪಘಾತಮಾಡಿರುತ್ತದೆ ಎಂದು ತಿಳಿಸಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು, ಸದರಿ ಅಪಘಾತ ಯಾರ ತಪ್ಪಿನಿಂದ ಆಗಿದೆ ಎಂಬುದರ ಬಗ್ಗೆ ಮಾಹಿತಿ ಇಲ್ಲ ಎಂದು, ಬಸ್ಸ ನಂಬರ ಗೊತ್ತಿಲ್ಲ ಎಂದು, ಪ್ರಕರಣದ ಕುರಿತು ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆ ಮೂಲಕ, ಪ್ರಾ.ಸಾ-4 ರವರು ಸಹ ಮುಖ್ಯ ವಿಚಾರಣೆಯಲ್ಲಿಯೇ 1 ನೇ ಆರೋಪಿತನ ಅಪರಾಧಗಳ ಕುರಿತು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯನುಡಿಯುವಲ್ಲಿ ವಿಫಲವಾಗಿದ್ದಾರೆ.

18. ಕಾರಣ, ಪ್ರಾ.ಸಾ-3 ರವರು ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುವದರಿಂದ, ಅಭಿಯೋಜನೆ ಪರ ವಕೀಲರು ಪ್ರಾ.ಸಾ-3 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀಸವಾಲು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ, ದಿನಾಂಕ:30-07-2022 ರಂದು ಬೆಳಿಗ್ಗೆ 11.00 ಗಂಟೆಯ ಸಮಯದಲ್ಲಿ ಚಾ.ಸಾ-1 ರವರು ಅಪಘಾತದ ಬಗ್ಗೆ ಮಾಹಿತಿ ನೀಡಿರುವ ಕುರಿತು, ಚಾ.ಸಾ-1, 4 ರವರೊಂದಿಗೆ ಆಸ್ಪತ್ರೆಗೆ ಹೋದಾಗ ಸದರಿ ಅಪಘಾತದಿಂದ ತಮ್ಮ ಎಡಗಾಲಿಗೆ ತೀವ್ರ ಸ್ವರೂಪದ ಗಾಯಗಳಾಗಿವೆ ಎಂದು ಚಾ.ಸಾ-6 ರವರು ತಿಳಿಸಿರುವ ಕುರಿತು, ಸದರಿ ಬಸ್ ಚಾಲಕನಾದ 1 ನೇ ಆರೋಪಿತನ ಕುರಿತು ಠಾಣೆಯಲ್ಲಿ ವಿಚಾರಣೆ ಮಾಡಿದಾಗ ಆತನ ಹೆಸರು ಸಂಗನಗೌಡ ಹಣಮಂತರಾಯ ಮಾಲಿಬಿರಾದಾರ ಎಂದು ಗೊತ್ತಾಗಿರುವ ಕುರಿತು, ಬಸ್ಸ ಚಾಲಕನ ತಪ್ಪಿನಿಂದ ಅಪಘಾತವಾಗಿದೆ ಎಂದು ಹೇಳಿಕೆ ನೀಡಿರುವ ಕುರಿತು

ಅಭಿಯೋಜನೆ ಪರ ವಕೀಲರು ಸೂಚಿಸಿದ ಹೇಳಿಕೆಗಳನ್ನು ಒಪ್ಪಿಕೊಂಡಿರುತ್ತಾರೆ. ಆದರೆ, ಪ್ರಕರಣದ ಕುರಿತು ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಕಾರಣ, ಅಭಿಯೋಜನೆಯು ಫ್ರಾ.ಸಾ−4 ರವರ ಹೇಳಿಕೆಯನ್ನು ನಿ.ಪಿ−15 ಎಂದು ಗುರುತಿಸಿಕೊಂಡಿರುತ್ತದೆ. ಆ ಮೂಲಕ, ಫ್ರಾ.ಸಾ−4 ರವರು 1 ನೇ ಆರೋಪಿತನ ಅಪರಾಧಗಳ ಕುರಿತು ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

19. ಆದರೆ, 1 ನೇ ಆರೋಪಿತನ ಪರ ವಕೀಲರು ಪಾಟೀಸವಾಲು ಮಾಡಿದ ಸಮಯದಲ್ಲಿ, ಅಪಘಾತವು ಯಾರ ತಪ್ಪಿನಿಂದ, ಹೇಗೆ ಮತ್ತು ಎಲ್ಲಿ ಆಗಿದೆ ಎಂಬುದರ ಬಗ್ಗೆ ವೈಯಕ್ತಿಕ ಮಾಹಿತಿ ಇಲ್ಲ ಎಂದು ಒಪ್ಪಿಕೊಂಡಿರುತ್ತಾರೆ. ಫ್ರಾ.ಸಾ−4 ರವರು ಸಹ ಕೇವಲ ಸಾಂಧರ್ಭಿಕ ಸಾಕ್ಷಿಯಾದ ಬೇರೆಯವರು ನೀಡಿದ ಮಾಹಿತಿಯ ಮೇರೆಗೆ ಸಾಕ್ಷ್ಯ ನುಡಿದಿರುತ್ತಾರೆ. ಕಾರಣ, 1 ನೇ ಆರೋಪಿತನ ಅಪರಾಧಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ಫ್ರಾ.ಸಾ−4 ರವರು ಸಹ ಯಾವುದೇ ರೀತಿಯಿಂದ ಸಹಕಾರಿಯಾಗಿರುವುದಿಲ್ಲ. ಸದರಿ ಸಾಕ್ಷ್ಯ ಸಹ ಪ್ರಕರಣದ ಉಳಿದ ಸಾಕ್ಷ್ಯಗಳ ಮೇಲೆ ಅವಲಂಭಿತವಾಗಿರುತ್ತದೆ.

20. ಪ್ರಕರಣದ ಏಕೈಕ ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿಯಾದ ಚಾ.ಸಾ−6 ರವರು ಫ್ರಾ.ಸಾ−5 ಎಂದು ಸಾಕ್ಷ್ಯ ನುಡಿದಿದ್ದು, ಮುಖ್ಯ ವಿಚಾರಣೆಯಲ್ಲಿ, ದಿಃ 30−07−2022 ರಂದು ಬೆಳಿಗ್ಗೆ 9.30 ಗಂಟೆಯ ಸಮಯದಲ್ಲಿ ಕುಳಗೇರಿಯಿಂದ ನರಗುಂದಕ್ಕೆ ಗೊಬ್ಬರ ತರಲು ಬೈಕ ನಂಬರ ಕೆ.ಎ−25/ಡಬ್ಲೂ−8887 ನೇದ್ದರ ಮೇಲೆ ಬರುವಾಗ ಕೊಣ್ಣೂರು ಗ್ರಾಮದ ಪೆಟ್ರೋಲ ಬಂಕ ಹತ್ತಿರ ಎದುರುಗಡೆಯಿಂದ ಕೆ.ಎಸ.ಆರ.ಟಿ.ಸಿ ಬಸ್ ಅತೀ ವೇಗವಾಗಿ ಬಂದು ತಮ್ಮ ಬೈಕಗೆ ಡಿಕ್ಕಿ ಪಡಿಸಿದ್ದು, ಸದರಿ ಅಪಘಾತದಿಂದ ತಮ್ಮ ಎಡಗಾಲಿಗೆ ಮತ್ತು ಬೆನ್ನಿಗೆ ಗಾಯವಾಗಿರುತ್ತವೆ ಎಂದು, ಸದರಿ ಅಪಘಾತದಿಂದ ತಮಗೆ ಪ್ರಜ್ಞೆ ಹೋಗಿದ್ದು, ಪ್ರಜ್ಞೆ ಬಂದಾಗ ಬಾಗಲಕೋಟೆಯ ಕಟ್ಟಿ ಆಸ್ಪತ್ರೆಗೆ ದಾಖಲಾಗಿದ್ದೆನು ಎಂದು ಸಾಕ್ಷ್ಯ

ನುಡಿದಿರುತ್ತಾರೆ. ಮುಂದುವರೆದು, ಸದರಿ ಬಸ್ ಚಾಲಕನನ್ನು ನೋಡಿರುವುದಿಲ್ಲ ಎಂದು, ಆತನ ಹೆಸರು ಗೊತ್ತಿಲ್ಲ ಎಂದು, ಬಸ್ಸ ಸಂಖ್ಯೆ ಗೊತ್ತಿಲ್ಲ ಎಂದು, ಪ್ರಕರಣದ ಕುರಿತು ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಆ ಮೂಲಕ, ಪ್ರಕರಣದ ಮುಖ್ಯ ಸಾಕ್ಷಿಯಾದ ಫ್ರಾ.ಸಾ−5 ರವರು ಸಹ ಮುಖ್ಯವಿಚಾರಣೆಯಲ್ಲಿ, 1 ನೇ ಆರೋಪಿತನ ಅಪರಾಧಗಳ ಕುರಿತು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿಯುವಲ್ಲಿ ಸಂಪೂರ್ಣವಾಗಿ ವಿಫಲವಾಗಿದ್ದಾರೆ.

21. ಕಾರಣ, ಫ್ರಾ.ಸಾ−5 ರವರು ಭಾಗಶಃ ಪ್ರತಿಕೂಲ ಸಾಕ್ಷ್ಯ ನುಡಿದಿರುವದರಿಂದ, ಅಭಿಯೋಜನೆ ಪರ ವಕೀಲರು ಫ್ರಾ.ಸಾ−3 ರವರನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ನ್ಯಾಯಾಲಯದ ಅನುಮತಿಯ ಮೇರೆಗೆ ಪಾಟೀಸವಾಲು ಮಾಡಿದ್ದು, ಸದರಿ ಪಾಟೀಸವಾಲಿನಲ್ಲಿ, ಬಸ್ಸ ನಂಬರ ಮತ್ತು 1 ನೇ ಆರೋಪಿತನ ಹೆಸರು ಗೊತ್ತಿಲ್ಲ ಎಂದು, ಅಪಘಾತದ ಸಮಯದಲ್ಲಿ ಬಸ್ಸ ಚಾಲಕನನ್ನು ನೋಡಿಲ್ಲ ಎಂದು, ಪ್ರಕರಣದ ಕುರಿತು ಹೇಳಿಕೆ ನೀಡಿಲ್ಲ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಕಾರಣ, ಅಭಿಯೋಜನೆಯು ಫ್ರಾ.ಸಾ−5 ರವರ ಹೇಳಿಕೆಯನ್ನು ನಿ.ಪಿ−16 ಎಂದು ಗುರುತಿಸಿಕೊಂಡಿರುತ್ತದೆ. ಆ ಮೂಲಕ ಸಂತ್ರಸ್ತ ಸಾಕ್ಷಿಯಾದ ಫ್ರಾ.ಸಾ−5 ರವರೇ 1 ನೇ ಆರೋಪಿತನ ಅಪರಾಧಗಳ ಕುರಿತು ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿಯುವಲ್ಲಿ ವಿಫಲವಾಗಿರುವುದು ಅಭಿಯೋಜನೆಗೆ ಭಾರಿ ಹಿನ್ನಡೆ ಉಂಟುಮಾಡಿರುತ್ತದೆ.

22. ಪ್ರಕರಣದ ಸ್ಥಳ ಮತ್ತು ಜಪ್ತು ಪಂಚನಾಮೆಯ ಸಾಕ್ಷಿಯಾದ ಚಾ.ಸಾ−2 ರವರು ಫ್ರಾ.ಸಾ−2 ಎಂದು ಸಾಕ್ಷ್ಯ ನುಡಿದಿದ್ದು, ಮುಖ್ಯ ವಿಚಾರಣೆಯಲ್ಲಿ, ನಿ.ಪಿ−2 ಸ್ಥಳ ಪಂಚನಾಮೆಗೆ ಸನ್ 2022 ರಲ್ಲಿ ಕೊಣ್ಣೂರು ಗ್ರಾಮದಲ್ಲಿ ಬೆಳಿಗ್ಗೆ 9.00 ಗಂಟೆಯ ಸಮಯದಲ್ಲಿ ಸಹಿ ಮಾಡಿದ್ದು, ಆ ಸಮಯದಲ್ಲಿ ಅಪಘಾತ ಸ್ಥಳವನ್ನು ಚಾಸಾ−1 ರವರು ತೋರಿಸಿರುತ್ತಾರೆ ಎಂದು, ಆ ಸಮಯದಲ್ಲಿ ಚಾಸಾ−3 ರವರೂ ಸಹ ಹಾಜರಿದ್ದರು ಎಂದು, 1−ಗಂಟೆಯ ನಂತರ ಕೊಣ್ಣೂರ ಪೋಲಿಸ ಠಾಣಾ ಆವರಣದಲ್ಲಿದ್ದ ಬೈಕನ ಫೋಟೊ ಪಡೆದಿದ್ದು, ನಿ.ಪಿ−5

ಜಪ್ತು ಪಂಚನಾಮೆಗೆ ಸಹಿ ಪಡೆದಿರುತ್ತಾರೆ ಎಂದು, ಆ ಸಮಯದಲ್ಲಿ ಸದರಿ ಬೈಕನ ಮುಂಭಾಗ ಸಂಪೂರ್ಣವಾಗಿ ಜಖಂ ಆಗಿದ್ದು, ಅದಕ್ಕೆ ಹಾಕಲಾಗಿದ್ದ ನಂಬರ ಪ್ಲೇಟ ಸಹ ಮುರಿದು ಹೋಗಿತ್ತು ಎಂದು,. ನಿಪಿಃ 4 ಪೋಟೊವನ್ನು ಅದೇ ಸಮಯದಲ್ಲಿ ಪಡೆದಿದ್ದು, ಅಂದಾಜು 2 ದಿನಗಳ ನಂತರ ನರಗುಂದ ಪೋಲಿಸ ಠಾಣೆ ಆವರಣದಲ್ಲಿ ಇನ್ನೊಂದು ಜಪ್ತು ಪಂಚನಾಮೆಗೆ ಸಹಿ ಮಾಡಿರುತ್ತೇನೆ ಎಂದು, ಆ ಸಮಯದಲ್ಲಿ ಬಸ್‌ನ್ನು ತೋರಿಸಿ, ನಂತರ ಸಹಿ ಪಡೆದು, ಫೋಟೋ ಪಡೆದಿರುತ್ತಾರೆ ಎಂದು, ದಾಖಲೆಗಳನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಕಾರಣ ಬಸ್ಸ ಜಪ್ತು ಪಂಚನಾಮೆಯನ್ನು ನಿ.ಪಿ-6 ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ-2(ಬಿ), 5(ಎ), 6(ಎ) ಎಂದು ಗುರುತಿಸಲಾಗಿದೆ. ಆ ಮೂಲಕ, ಫ್ರಾ.ಸಾ-2 ರವರು ಮುಖ್ಯ ವಿಚಾರಣೆಯಲ್ಲಿ, ನಿ.ಪಿ-2 ರಿಂದ 6 ದಾಖಲೆಗಳ ಅಂಶಗಳಿಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಕಾರಣ, ಸದರಿ ದಾಖಲೆಗಳ ಇನ್ನೊಂದು ಸಾಕ್ಷಿಯಾದ ಚಾ.ಸಾ-3 ರವರನ್ನು ಅಭಿಯೋಜನೆಯು ವಿಚಾರಣೆಯಿಂದ ಕೈ-ಬಿಟ್ಟಿರುತ್ತದೆ.

23. ದಾಖಲೆಗಳ ಪ್ರಕಾರ, ನಿ.ಪಿ-2 ಸ್ಥಳ ಪಂಚನಾಮೆಯನ್ನು ದಿನಾಂಕ:02-08-2022 ರಂದು ಮಧ್ಯಾಹ್ಣ 12.30 ರಿಂದ 01.30 ರವರೆಗೆ ಜರುಗಿಸಲಾಗಿದ್ದು, ನಿ.ಪಿ-5 ಜಪ್ತು ಪಂಚನಾಮೆಯನ್ನು ಅದೇ ದಿನ ಮಧ್ಯಾಹ್ಣ 02.00 ರಿಂದ 03.00 ರವರೆಗೆ ಜರುಗಿಸಲಾಗಿದೆ ಹಾಗೂ ನಿ.ಪಿ-6 ಜಪ್ತು ಪಂಚನಾಮೆಯನ್ನು ದಿನಾಂಕ:05-08-2022 ರಂದು ಸಂಜೆ 05.00 ರಿಂದ 06.00 ಗಂಟೆಯ ಅವಧಿಯಲ್ಲಿ ಜರುಗಿಸಲಾಗಿದೆ. ದಿನಾಂಕ ಮತ್ತು ಸಮಯಗಳ ಕುರಿತು ಫ್ರಾ.ಸಾ-2 ರವರು ನಿ.ಪಿ-2, 5, 6 ದಾಖಲೆಗಳ ಅಂಶಗಳಿಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದರೆ, ಅಪಘಾತ ಪ್ರಕರಣದಲ್ಲಿ, ಅಪಘಾತ ಸ್ಥಳ, ಅಪಘಾತಕ್ಕೆ ಒಳಪಟ್ಟ ವಾಹನಗಳ ಬಗ್ಗೆ ಹಾಗೂ ಗಾಯಾಳುಗಳ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ಕೇವಲ, ಯಾವ ವ್ಯಕ್ತಿಯ ಅತಿವೇಗ ಮತ್ತು ಅಜಾಗರೂಕತೆಯಿಂದ ಅಪಘಾತವಾಗಿದೆ ಎಂಬುದು ಮಾತ್ರ ವಿವಾದಕ್ಕೆ ಒಳಪಟ್ಟ ಅಂಶವಾಗಿರುತ್ತದೆ. ಅದೇ ರೀತಿ, ಪ್ರಕರಣದ ಉಳಿದ ಎಲ್ಲ ಸಾಕ್ಷಿದಾರರು 1 ನೇ ಆರೋಪಿತನ ಅಪರಾಧಗಳನ್ನು

ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿರುವ ಕಾರಣ, ಫ್ರಾ.ಸಾ–2 ರವರ ಭಾಗಶಃ ಪೂರಕ ಸಾಕ್ಷ್ಯ ಹೆಚ್ಚಿನ ಮಹತ್ವ ಪಡೆದುಕೊಳ್ಳುವುದಿಲ್ಲ.

24. ಪ್ರಕರಣದ ತನಿಖಾಧಿಕಾರಿಯಾದ ಚಾ.ಸಾ–11 ರವರು ಫ್ರಾ.ಸಾ–6 ಎಂದು ಸಾಕ್ಷ್ಯ ನುಡಿದಿದ್ದು, ಮುಖ್ಯ ವಿಚಾರಣೆಯಲ್ಲಿ, ದಿಃ 01–08–2022 ರಂದು ಸಂಜೆ 4.00 ಗಂಟೆಯ ಸಮಯದಲ್ಲಿ ಚಾಸಾ–1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ, ಪ್ರಕರಣ ದಾಖಲಿಸಿ, ಪ್ರ.ವ.ವ.ಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದು, ದಿಃ 02–08–2022 ರಂದು ಚಾಸಾ–1 ರವರು ತೋರಿಸಿದ ಅಪಘಾತ ಸ್ಥಳದಲ್ಲಿ ಚಾಸಾ–2, 3 ರವರ ಸಮಕ್ಷಮ ಮಧ್ಯಾಹ್ನ 12.30 ರಿಂದ 01.30 ರವರೆಗೆ ನಿಪಿ–2 ರಂತೆ ಸ್ಥಳ ಪಂಚನಾಮೆ ಜರುಗಿಸಿ, ನಿಪಿ–3 ರಂತೆ ಫೋಟೋ ಪಡೆದು, ಸ್ಥಳದ ಕಚ್ಚಾ ನಕಾಶ ತಯಾರಿಸಿಕೊಂಡಿರುತ್ತೇನೆ ಎಂದು, ಮಧ್ಯಾಹ್ನ ಕೊಣ್ಣೂರು ಹೊರಠಾಣೆ ಆವರಣದಲ್ಲಿದ್ದ ಬೈಕ ನಂ.ಕೆ.ಎ–24/ಡಬ್ಲೂ–8887 ನೆದ್ದರ ಕುರಿತು ಚಾಸಾ–2, 3 ರವರ ಸಮಕ್ಷಮ ಮಧ್ಯಾಹ್ನ 2.00 ರಿಂದ 3.00 ರವರೆಗೆ ನಿಪಿ–5 ರಂತೆ ಜಪ್ತು ಪಂಚನಾಮೆ ಜರುಗಿಸಿ, ಸದರಿ ಬೈಕನ್ನು ಜಪ್ತು ಪಡಿಸಿಕೊಂಡು ಫೋಟೋ ಪಡೆದಿದ್ದು, ದಿಃ05–08–2022 ರಂದು ಸಿಬ್ಬಂದಿಯಾದ ಚಾಸಾ–8 ರವರು ಅಪಘಾತಕ್ಕೆ ಒಳಪಟ್ಟ ಬಸ್ ನಂಬರ ಕೆಎ–33/ಎಫ–0407 ನೇದ್ದನ್ನು ಪತ್ತೆ ಹಚ್ಚಿ ಠಾಣೆಗೆ ತೆಗೆದುಕೊಂಡು ಬಂದು ವರದಿ ಸಲ್ಲಿಸಿದ್ದು, ಅದೇ ದಿನ ಸಂಜೆ 5.00 ರಿಂದ 6.00 ಗಂಟೆಯವರೆಗೆ ನರಗುಂದ ಠಾಣಾ ಆವರಣದಲ್ಲಿ ಚಾಸಾ–2, 3 ರವರ ಸಮಕ್ಷಮ ನಿಪಿ–6 ರಂತೆ ಜಪ್ತು ಪಂಚನಾಮೆ ಜರುಗಿಸಿ, ಸದರಿ ಬಸ್‌ನ್ನು ಜಪ್ತು ಪಡಿಸಿಕೊಂಡು, ದಿಃ 06–08–2022 ರಂದು ಪ್ರಕರಣದ ಕುರಿತು ಮಾಹಿತಿ ನೀಡುವಂತೆ ಕೆ.ಎಸ.ಆರ್.ಟಿ.ಸಿ ಅಧಿಕಾರಿಯಾದ ಚಾಸಾ–7 ರವರಿಗೆ ನಿಪಿ–9 ರಂತೆ ನೋಟಿಸ ನೀಡಿದ್ದು, ಅದೇ ದಿನ ಚಾಸಾ–7 ರವರು 1 ನೇ ಆರೋಪಿತನ ಕರ್ತವ್ಯ ದೃಢಿಕರಣ ಪತ್ರ, ಮುಚ್ಚಳಿಕೆ ಪತ್ರ ಮತ್ತು ವಾಹನದ ದಾಖಲೆಗಳನ್ನು ನೀಡಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಮುಂದುವರೆದು, ಅದೇ ದಿನ ಚಾಸಾ–7 ರವರ ಹೇಳಿಕೆ ಪಡೆದು, ಬಸ್ಸನ್ನು ಚಾಸಾ–7 ರವರ ಮಧ್ಯಂತರ

ಸ್ವಾಧೀನಕ್ಕೆ ಬಿಡುಗಡೆ ಮಾಡಿದ್ದು, ದಿಃ 08-08-2022 ರಂದು 1 ನೇ ಆರೋಪಿತನ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿ ಜಾಮೀನಿನ ಮೇಲೆ ಬಿಡುಗಡೆ ಮಾಡಿ, ಅದೇ ದಿನ ಚಾಸಾ-1 ರವರ ಮರುಹೇಳಿಕೆ, ಚಾಸಾ-4, 5 ರವರ ಹೇಳಿಕೆಗಳನ್ನು ಪಡೆದು, ದಿಃ19-09-2022 ರಂದು 2 ನೇ ಆರೋಪಿತನಿಗೆ ನೋಟಿಸ ನೀಡಿದ್ದು, ಆತ ಹಾಜರುಪಡಿಸಿದ ದಾಖಲೆಗಳ ಪ್ರಕಾರ ಬೈಕಗೆ ವಿಮೆ ಇಲ್ಲದೆ ಇರುವುದು ಕಂಡು ಬಂದಿರುತ್ತದೆ ಎಂದು, ದಿಃ04-11-2022 ರಂದು 2 ನೇ ಆರೋಪಿತನ ಗಾಯದ ಪ್ರಮಾಣ ಪತ್ರ ಪಡೆದು, ದಿಃ 28-11-2022 ರಂದು ಚಾ.ಸಾ-9 ರವರಿಂದ ವಾಹನ ತಪಾಸಣಾ ವರದಿ ಪಡೆದು, ಸಿಬ್ಬಂದಿಯಾದ ಪಿಸಿ-414 ರವರಿಂದ ಸ್ಥಳ ಮತ್ತು ಜಪ್ತು ಪಂಚನಾಮೆಗಳ ಸಮಯದಲ್ಲಿ ತೆಗೆದ ಫೋಟೋಗಳನ್ನು ಡಿ.ವಿ.ಡಿಗೆ ವರ್ಗಾಯಿಸಿದ ಬಗ್ಗೆ ಪ್ರಮಾಣ ಪತ್ರ ಪಡೆದು, ದಿಃ 28-11-2022 ರಂದು ಪ್ರಕರಣದ ತನಿಖೆ ಪೂರ್ಣಗೊಳಿಸಿ, ಅಂತಿಮ ವರದಿ ಸಲ್ಲಿಸಿರುತ್ತೇನೆ ಎಂದು ದಾಖಲೆಗಳನ್ನು ಹಾಗೂ 1 ನೇ ಆರೋಪಿತನನ್ನು ಗುರುತಿಸಿ ಸಾಕ್ಷ್ಯ ನುಡಿದಿರುತ್ತಾರೆ. ಕಾರಣ, ಚಾ.ಸಾ-7 ರವರಿಗೆ ನೀಡಿದ ನೋಟಿಸನ್ನು ನಿ.ಪಿ-9 ಎಂದು, ಗಾಐದ ಪ್ರಮಾಣ ಪತ್ರವನ್ನು ನಿ.ಪಿ-10 ಎಂದು, ಹಾಜರಾತಿ ಪತ್ರವನ್ನು ನಿ.ಪಿ-11 ಎಂದು, ಮುಚ್ಚಳಿಕೆ ಪತ್ರವನ್ನು ನಿ.ಪಿ-12 ಎಂದು, ನೋಟಿಸನ್ನು ನಿ.ಪಿ-13 ಎಂದು, ವಾಹನ ತಪಾಸಣಾ ವರದಿಯನ್ನು ನಿ.ಪಿ-14 ಎಂದು, ಪ್ರಥಮ ವರ್ತಮಾನ ವರದಿಯನ್ನು ನಿ.ಪಿ-17 ಎಂದು, ಕೃತ್ಯ ಸ್ಥಳದ ಕಚ್ಚಾ ನಕಾಶೆಯನ್ನು ನಿ.ಪಿ-18 ಎಂದು, ವಾಹನ ಪತ್ತೆಗಾಗಿ ನೀಡಿದ ಜ್ಞಾಪನಾ ಪತ್ರವನ್ನು ನಿ.ಪಿ-19 ಎಂದು, ಚಾ.ಸಾ-8 ರವರ ವರದಿಯನ್ನು ನಿ.ಪಿ-20 ಎಂದು, 2 ನೇ ಆರೋಪಿತನಿಗೆ ನೀಡಿದ ನೋಟಿಸನ್ನು ನಿ.ಪಿ-21 ಎಂದು, ಸಿಬ್ಬಂದಿಯ ಪ್ರಮಾಣ ಪತ್ರವನ್ನು ನಿ.ಪಿ-22 ಎಂದು, ಡಿ.ವಿ.ಡಿಯನ್ನು ನಿ.ಪಿ-23 ಎಂದು, ಸಾಕ್ಷಿಯ ಸಹಿಗಳನ್ನು ನಿ.ಪಿ-1(ಬಿ), 2(ಸಿ), 6(ಬಿ), 9(ಬಿ), 10(ಎ), 11(ಎ), 12(ಎ), 13(ಎ), 14(ಎ), 17(ಎ), 18(ಎ), 19(ಎ), 20(ಎ), 21(ಎ), 22(ಎ), 23(ಎ), ಎಂದು ಗುರುತಿಸಲಾಗಿದೆ. ಆರೋಪಿತನ ಪರ ವಕೀಲರು ಪಾಟೀ ಸವಾಲು ಮಾಡಿದ ಸಮಯದಲ್ಲಿಯೂ ಸಹ ಪ್ರಾ.ಸಾ-6 ರವರು ತಮ್ಮ ತನಿಖೆಯ ಬಗ್ಗೆ ಅಭಿಯೋಜನೆಗೆ ಪೂರಕವಾಗಿ ಸಾಕ್ಷ್ಯ ನುಡಿದಿರುತ್ತಾರೆ.

25. 1 ನೇ ಆರೋಪಿತನ ಪರ ವಕೀಲರು, ನೋಟಿಸಗಳನ್ನು, ಗಾಯದ ಪ್ರಮಾಣ ಪತ್ರ, ಹಾಜರಾತಿ ಪತ್ರ, ಮುಚ್ಚಳಿಕೆ ಪತ್ರ, ವಾಹನ ತಪಾಸಣಾ ವರದಿಯನ್ನು ನಿಶಾನೆಗಳಾಗಿ ಗುರುತಿಸಲು ತಕರಾರು ಇಲ್ಲ ಎಂದು ತಿಳಿಸಿದ್ದರಿಂದ ಸದರಿ ದಾಖಲೆಗಳನ್ನು ನಿ.ಪಿ–9 ರಿಂದ 14 ಎಂದು ಗುರುತಿಸಲಾಗಿರುತ್ತದೆ. ಕಾರಣ, ಇನ್ಕೋರ್ವ ಪಂಚನಾಮಾ ಸಾಕ್ಷಿಯಾದ ಚಾ.ಸಾ–3, 1 ನೇ ಆರೋಪಿತನ ಮೇಲಾಧಿಕಾರಿ ಚಾ.ಸಾ–7, ವಾಹನ ಪತ್ತೆ ಹಚ್ಚಿ ಹಾಜರುಪಡಿಸಿದ ಸಿಬ್ಬಂದಿ ಚಾ.ಸಾ–8, ವಾಹನ ತಪಾಸಣಾ ವರದಿ ನೀಡಿದ ಸಾರಿಗೆ ಅಧಿಕಾರಿ ಚಾ.ಸಾ–9, ಗಾಯದ ಪ್ರಮಾಣ ಪತ್ರ ನೀಡಿದ ವೈದ್ಯಾಧೀಕಾರಿ ಚಾ.ಸಾ–10 ರವರನ್ನು ವಿಚಾರಣೆಯಿಂದ ಕೈ–ಬಿಡುವಂತೆ ಅಭಿಯೋಜನೆಯ ಪರ ವಕೀಲರು ತಿಳಿಸಿರುತ್ತಾರೆ. ಕಾರಣ, ಸದರಿ ಸಾಕ್ಷಿದಾರರ ವಿಚಾರಣೆ ಆಗಿರುವುದಿಲ್ಲ.

26. ಪ್ರಕರಣದಲ್ಲಿ ಲಭ್ಯವಿರುವ ಮೌಖಿಕ ಮತ್ತು ದಾಖಲಾತಿ ಸಾಕ್ಷ್ಯಗಳನ್ನು ಪರಿಗಣಿಸಿದಾಗ, 1 ನೇ ಆರೋಪಿತನ ಅತಿವೇಗ ಮತ್ತು ಅಜಾಗರೂಕತೆಯ ವಾಹನ ಚಾಲನೆಯಿಂದ ಅಪಘಾತವಾಗಿದೆ ಎಂಬುದನ್ನು ರುಜುವಾತುಪಡಿಸುವಲ್ಲಿ ಮುಖ್ಯವಾಗಿ ಗಾಯಾಳು ಫ್ರಾ.ಸಾ–5 ರವರು ವಿಫಲವಾಗಿದ್ದು, ಅದೇ ರೀತಿ ಸಾಂಧರ್ಭಿಕ ಸಾಕ್ಷಿಯಾದ ಫ್ರಾ.ಸಾ–3 ರವರು ಸಹ ವಿಪಲವಾಗಿದ್ದಾರೆ. ಕಾರಣ, ಇತರ ಸಾಂಧರ್ಭಿಕ ಸಾಕ್ಷಿಗಳಾದ ಫ್ರಾ.ಸಾ–1, 4 ರವರ ಭಾಗಶಃ ಪೂರಕ ಸಾಕ್ಷ್ಯವನ್ನು ಪರಿಗಣಿಸಿ 1 ನೇ ಆರೋಪಿತನು ಅಪರಾಧಿ ಎಂದು ತಿರ್ಮಾನಿಸಲು ಸಾಧ್ಯವಾಗಿರುವುದಿಲ್ಲ. ಕಾರಣ, ಪ್ರಕರಣದ ಎಲ್ಲಾ ಸಾಕ್ಷ್ಯಗಳನು ಪರಿಗಣಿಸಿ, ಅಭಿಯೋಜನೆಯು 1 ನೇ ಆರೋಪಿತನ ಅಪರಾದಗಳನ್ನು ಸಂಶಯಾತೀತವಾಗಿ ರುಜುವಾತುಪಡಿಸುವಲ್ಲಿ ವಿಫಲವಾಗಿದೆ ಎಂದು ತಿರ್ಮಾನಿಸಿ, ಸದರಿ ಸಂಶಯದ ಲಾಭವನ್ನು 1 ನೇ ಆರೋಪಿತನಿಗೆ ನೀಡುವುದೆಂದು ನಿರ್ಧರಿಸಲಾಗಿದೆ. ಕಾರಣ **ಅಂಶ ನಂ.1** ನೇದ್ದನ್ನು **ನಕಾರಾತ್ಮಕವಾಗಿ** ಉತ್ತರಿಸಲಾಗಿದೆ.

27. **ಅಂಶ ನಂ.2** :– ಈ ಮೇಲಿನ ಚರ್ಚೆಯ ಕಾರಣಗಳ ಆಧಾರದ ಮೇಲೆ ಈ ಕೆಳಗಿನಂತೆ ಅಂತಿಮ ಆದೇಶ ಮಾಡಿದ್ದೇನೆ.

## –:: ಆದೇಶ ::–

*ದಂಡ ಪ್ರಕ್ರಿಯಾ ಸಂಹಿತೆ ಕಲಂ.255(1) ರಡಿಯಲ್ಲಿ ಕಾರ್ಯ ನಿರ್ವಹಿಸುತ್ತಾ ಭಾರತೀಯ ದಂಡ ಸಂಹಿತೆಯ ಕಲಂ.279, 338 ರಡಿಯಲ್ಲಿ ಶಿಕ್ಷಿಸಬಹುದಾಧ ಅಪರಾಧಗಳಿಗೆ 1 ನೇ ಆರೋಪಿತನನ್ನು ನಿರಪರಾಧಿ ಎಂದು ತೀರ್ಮಾನಿಸಿ, ಬಿಡುಗಡೆ ಮಾಡಲಾಗಿದೆ.*

*1 ನೇ ಆರೋಪಿತನ ಮತ್ತು ಆತನ ಜಾಮೀನುದಾರನ ಮುಚ್ಚಳಿಕೆ ಪತ್ರಗಳನ್ನು ರದ್ದು ಪಡಿಸಲಾಗಿದೆ.*

*ಈ ಪ್ರಕರಣದಲ್ಲಿ ಜಪ್ತು ಮಾಡಿಕೊಳ್ಳಲಾದ ಕೆ.ಎಸ್.ಆರ್.ಟಿ.ಸಿ ಬಸ್ಸ ನಂ.ಕೆ.ಎ–33/ಎಫ್–0407 ನೇದ್ದರ ಕುರಿತು ಇರುವ ಮಧ್ಯಂತರ ಸ್ವಾಧೀನವನ್ನು ಖಾಯಂಗೊಳಿಸಲಾಗಿದೆ.*

*ಈ ಪ್ರಕರಣದಲ್ಲಿ ಜಪ್ತು ಮಾಡಿಕೊಳ್ಳಲಾದ ಬೈಕ ನಂ.ಕೆ.ಎ–24/ಡಬ್ಲೂ–8887 ನೇದ್ದನ್ನು ಮೇಲ್ಮನವಿ ಅವಧಿಯ ಒಳಗಾಗಿ ಅರ್ಜಿ ಸಲ್ಲಿಸಿದಲ್ಲಿ ಮಾಲೀಕನಿಗೆ ಸೂಕ್ತ ಭದ್ರತೆ ಪಡೆದು ಬಿಡುಗಡೆಮಾಡತಕ್ಕದ್ದು. ಒಂದುವೇಳೆ, ಯಾವುದೇ ಅರ್ಜಿ ಸಲ್ಲಿಕೆಯಾಗದೇ ಇದ್ದಲ್ಲಿ ಮೇಲ್ಮನವಿ ಅವಧಿ ಮುಗಿದ ನಂತರ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಠಾಣಾಧಿಕಾರಿಗೆ ಆದೇಶಿಸಲಾಗಿದೆ.*

(ಈ ತೀರ್ಪನ್ನು ಬೆರಳಚ್ಚುಮಾಡಿ, ತಪ್ಪಿದ್ದಲ್ಲಿ ತಿದ್ದಿ ಇವತ್ತು ದಿನಾಂಕ: 01 ನೇ ಜುಲೈ, 2026 ರಂದು ಈ ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು)

**( ಜಿನ್ನಪ್ಪಾ ಚೌಗಲಾ )**
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ., ನರಗುಂದ.

## –:: ಅನುಬಂಧ ::–

### 1. ಅಭಿಯೋಜನೆಯವರ ಪರ ಪರೀಕ್ಷಿಸಿದ ಸಾಕ್ಷಿಗಳುಃ–

| | | |
|---|---|---|
| ಫ್ರಾಸಾ–1 | : | ದುಂಡಯ್ಯ ಮರಯ್ಯ ಹಿರೇಮಠ |
| ಫ್ರಾಸಾ–2 | : | ಶಿವಸಂಗಯ್ಯ ಮಲ್ಲಯ್ಯ ಮೇಟಿ |
| ಫ್ರಾಸಾ–3 | : | ಶಿವಯ್ಯ ಪತ್ರಯ್ಯ ಮುನಿಯಪ್ಪನವರ |
| ಫ್ರಾಸಾ–4 | : | ಶರಣಬಸಯ್ಯ ಚಂದ್ರಶೇಖರಯ್ಯ ಮೇಟಿ |
| ಫ್ರಾಸಾ–5 | : | ಬಸಯ್ಯ ಶರಣಬಸಯ್ಯ ಮೇಟಿ |
| ಫ್ರಾಸಾ–6 | : | ದೇವೆಂದ್ರಪ್ಪ ಕಲ್ಲಪ್ಪ ಹಾಲವರ. |

### 2. ಅಭಿಯೋಜನೆಯವರ ಪರ ಹಾಜರುಪಡಿಸಿದ ದಾಖಲೆಗಳುಃ–

| | | |
|---|---|---|
| ನಿಶಾನೆ ಪಿ–1 | : | ದೂರು |
| ನಿಶಾನೆ ಪಿ–1(ಎ) | : | ಫ್ರಾಸಾ–1 ರವರ ಸಹಿ |
| ನಿಶಾನೆ ಪಿ–1(ಬಿ) | : | ಫ್ರಾಸಾ–2 ರವರ ಸಹಿ |
| ನಿಶಾನೆ ಪಿ–2 | : | ಸ್ಥಳ ಪಂಚನಾಮೆ |
| ನಿಶಾನೆ ಪಿ–2(ಎ) | : | ಫ್ರಾಸಾ–2 ರವರ ಸಹಿ |
| ನಿಶಾನೆ ಪಿ–2(ಬಿ) | : | ಫ್ರಾಸಾ–2 ರವರ ಸಹಿ |
| ನಿಶಾನೆ ಪಿ–2(ಸಿ) | : | ಸಹಿ |
| ನಿಶಾನೆ ಪಿ–3,4 | : | ಭಾವಚಿತ್ರಗಳ |
| ನಿಶಾನೆ ಪಿ–5 | : | ಜಪ್ತು ಪಂಚನಾಮೆ |
| ನಿಶಾನೆ ಪಿ–5(ಎ) | : | ಫ್ರಾಸಾ–2 ರವರ ಸಹಿ |
| ನಿಶಾನೆ ಪಿ–6 | : | ಜಪ್ತ ಪಂಚನಾಮಾ |
| ನಿಶಾನೆ ಪಿ–6(ಎ) | : | ಪಾಸಾ–2 ರವರ ಸಹಿ |
| ನಿಶಾನೆ ಪಿ–6(ಬಿ) | : | ಪಾಸಾ–6 ರವರ ಸಹಿ |
| ನಿಶಾನೆ ಪಿ–8 | : | ಫ್ರಾಸಾ–3 ರವರ ಹೇಳಿಕೆ |
| ನಿಶಾನೆ ಪಿ–9 | : | ಫ್ರಾಸಾ –3 ರವರ ಹೇಳಿಕೆ |
| ನಿಶಾನೆ ಪಿ–9(ಎ) | : | ಫ್ರಾಸಾ–6 ರವರ ಸಹಿ |
| ನಿಶಾನೆ ಪಿ–10 | : | ಗಾಯದ ಪ್ರಮಾಣಪತ್ರ |
| ನಿಶಾನೆ ಪಿ–10(ಎ) | : | ಫ್ರಾಸಾ–6 ರವರ ಸಹಿ |

| | | |
|---|---|---|
| ನಿಶಾನೆ ಪಿ–11 | : | ಪ್ರಮಾಣ ಪತ್ರ |
| ನಿಶಾನೆ ಪಿ–11(ಎ) | : | ಫ್ರಾಸಾ–6 ರವರ ಸಹಿ |
| ನಿಶಾನೆ ಪಿ–12 | : | ಇಂಇಿಮನಿಟಿ ಬಾಂಡ |
| ನಿಶಾನೆ ಪಿ–12(ಎ) | : | ಫ್ರಾಸಾ–6 ರವರ ಸಹಿ |
| ನಿಶಾನೆ ಪಿ–13 | : | ನೋಟಿಸ್ |
| ನಿಶಾನೆ ಪಿ–14 | : | ಐ ಎಂ ವಿ ವರದಿ |
| ನಿಶಾನೆ ಪಿ–14(ಎ) | : | ಫ್ರಾಸಾ–6 ರವರ ಸಹಿ |
| ನಿಶಾನೆ ಪಿ–15 | : | ಫ್ರಾಸಾ–4 ರವರ ಹೇಳಿಕೆ |
| ನಿಶಾನೆ ಪಿ–16 | : | ಫ್ರಾಸಾ–5 ರವರ ಹೇಳಿಕೆ |
| ನಿಶಾನೆ ಪಿ–17 | : | ಪ್ರಥಮ ವರ್ತಮಾನ ವರದಿ |
| ನಿಶಾನೆ ಪಿ–17(ಎ) | : | ಫ್ರಾಸಾ–6 ರವರ ಸಹಿ |
| ನಿಶಾನೆ ಪಿ–18 | : | ಕಚ್ಚಾ ನಕಾಶೆ |
| ನಿಶಾನೆ ಪಿ–18(ಎ) | : | ಫ್ರಾಸಾ–6 ರವರ ಸಹಿ |
| ನಿಶಾನೆ ಪಿ–19 | : | ಜ್ಞಾಪನಾ ಪತ್ರ |
| ನಿಶಾನೆ ಪಿ–19(ಎ) | : | ಫ್ರಾಸಾ–6 ರವರ ಸಹಿ |
| ನಿಶಾನೆ ಪಿ–20 | : | ವರದಿ |
| ನಿಶಾನೆ ಪಿ–20(ಎ) | : | ಫ್ರಾಸಾ–6 ರವರ ಸಹಿ |
| ನಿಶಾನೆ ಪಿ–21 | : | ನೋಟೀಸ್ |
| ನಿಶಾನೆ ಪಿ–21(ಎ) | : | ಫ್ರಾಸಾ–6 ರವರ ಸಹಿ |
| ನಿಶಾನೆ ಪಿ–22 | : | ಪ್ರಮಾಣ ಪತ್ರ |
| ನಿಶಾನೆ ಪಿ–22(ಎ) | : | ಫ್ರಾಸಾ–6 ರವರ ಸಹಿ |
| ನಿಶಾನೆ ಪಿ–23 | : | ಡಿ.ವಿ.ಡಿ. |

3. **ಆರೋಪಿಯ ಪರ ಪರೀಕ್ಷಿಸಿದ ಸಾಕ್ಷಿಗಳುಃ**

– ಯಾರು ಇಲ್ಲ –

4. **ಆರೋಪಿಯ ಪರ ಹಾಜರುಪಡಿಸಿದ ದಾಖಲೆಗಳುಃ–**

– ಏನು ಇಲ್ಲ –

**5. ಅಭಿಯೋಜನೆಯವರ ಪರ ಹಾಜರುಪಡಿಸಿದ ಮುದ್ದೆಮಾಲುಗಳುಃ–**

– ಏನು ಇಲ್ಲ

**sd/-**

( **ಜೆನ್ನಪ್ಪಾ ಚೌಗಲಾ** )
ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಲಯ., ನರಗುಂದ